(ದಿನಾಂಕ 16-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಸ್.ಎಂ.ಎಸ್.ವಕೀಲರಿಂದಃ-**

1. ನಾನು 3 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು. ಸದರಿ ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿದ್ದೇನೆ. ಹೊಂಡದಿಂದ 1 ನೇ ಪ್ರತಿವಾದಿಯು ಪೈಪು ಲೈನ್ ಹಾಕಿಸಿದ್ದು ಆದ್ದರಿಂದ ಧನ ಕರುಗಳಿಗೆ ಕುಡಿಯುವ ನೀರಿನ ತೊಂದರೆ ಆಗುತ್ತದೆ ಎಂಬ ಕಾರಣಕ್ಕಾಗಿ ನಾವು ಈ ದಾವೆ ದಾಖಲಿಸಿದ್ದೇವೆ. ತುಂಗಾಭದ್ರ ನದಿಯಿಂದ ಪೈಪು ಮೂಲಕ ಬಹಳಷ್ಟು ರೈತರು ತಮ್ಮ ಜಮೀನುಗಳಿಗೆ ನೀರನ್ನು ತೆಗೆದುಕೊಳ್ಳುತ್ತಾರೆ ಅಂದರೆ ಸರಿ. ಬಾಸ್ಕರರಾಜು ಮಾಡಿರುವಂತಹ ಹೊಂಡದ ಅಕ್ಕ ಪಕ್ಕ ನಮ್ಮ ಗ್ರಾಮದ ಅಕ್ಕಪಕ್ಕದ ಗ್ರಾಮದ ರೈತರು ತುಂಗಾಭದ್ರ ನದಿಯಿಂದ ಪೈಪು ಲೈನ್ ಮೂಲಕ ತಮ್ಮ ಜಮೀನಿಗೆ ನೀರು ಪಡೆಯುತ್ತಾರೆ ಅಂದರೆ ಸರಿ. ಸದರಿ ರೈತರೆಲ್ಲರೂ ನೀರು ಶೇಖರಣೆ ಆಗಲೀ ಎಂದು ನದಿಯಲ್ಲಿ ತೆಗ್ಗನ್ನು ಮಾಡಿರುತ್ತಾರೆ ಅಂದರೆ ಸರಿ.

2. ಬಾಸ್ಕರರಾಜು ಇವರು ನೀರಿನ ಸಲುವಾಗಿ ಮಾಡಿರುವಂತಹ ತೆಗ್ಗನ್ನು ಯಾವುದೇ ತೊಂದರೆ ಆಗಬಾರದು ಎಂಬ ಕಾರಣಕ್ಕಾಗಿ ಮೇಲ್ಭಾಗವನ್ನು ಮುಚ್ಚಿರುತ್ತಾರೆ ಅಂದರೆ ಸರಿ. ಬೇರೆ ರೈತರು ಸದರಿ ನೀರಿಗಾಗಿ ಮಾಡಿರುವಂತ ತೆಗ್ಗಿನಲ್ಲಿ ಧನಕರುಗಳು ಮತ್ತು ಇತರೆ ಪ್ರಾಣಿಗಳು ಬಿದ್ದು ಪ್ರಾಣ ಹಾನಿ ಮಾಡಿಕೊಳ್ಳುವ ಸಾಧ್ಯತೆ ಇದೆ ಅಂದರೆ ಸರಿ. ಬಾಸ್ಕರರಾಜು ಮತ್ತು ಇತರೆ ರೈತರು ನೀರಿಗಾಗಿ ಮಾಡಿರುವಂತಹ ತೆಗ್ಗಿನಲ್ಲಿ ಧನಕರಗಳು ಬಿದ್ದು ಹಾನಿ ಆಗಬಾರದು ಅನ್ನುವ ಉದ್ದೇಶಕ್ಕಾಗಿಯೂ ಸಹ ನಾವು ಈ ದಾವೆಯನ್ನು ದಾಖಲಿಸಿರುತ್ತೇವೆ. ಬಾಸ್ಕರರಾಜು ಇವರ ಹೊಂಡದ ಪಕ್ಕದಲ್ಲಿರುವ ರೈತರು ಅವರೂ ಸಹ ಹೊಂಡಗಳನ್ನು ಮಾಡಿಕೊಂಡಿದ್ದು ಅವರ ಮೇಲೆ ನಾವು ಯಾವುದೇ ದಾವೆ

ದಾಖಲಿಸಿರುವುದಿಲ್ಲ. ಸದರಿ ರೈತರಲ್ಲಿ ಕೆಲ ರೈತರು ಸಂಬಂದಿಸಿದ ಇಲಾಖೆಯಿಂದ ಪರವಾನಿಗೆ ಪಡೆದು ಹೊಂಡಗಳನ್ನು ಮಾಡಿರುತ್ತಾರೆ ಕೆಲ ರೈತರು ಪರವಾನಿಗೆಯನ್ನು ಪಡೆಯದೇ ಆ ರೀತಿ ಹೊಂಡಗಳನ್ನು ಮಾಡಿರುತ್ತಾರೆ ಅಂದರೆ ಸರಿ. ಉಳಿದ ರೈತರ ಮೇಲೆ ಸಾರ್ವಜನಿಕರ ಹಿತಕ್ಕಾಗಿ ದಾವೆ ದಾಖಲಿಸಲು ನಮಗೆ ಯಾವುದೇ ತೊಂದರೆ ಇರಲಿಲ್ಲ.

3. 1 ನೇ ಪ್ರತಿವಾದಿಯ ಮೇಲೆ ಮಾತ್ರ ಏಕೆ ದಾವೆ ದಾಖಲಿಸಿದ್ದಾರೆ ಅಂದರೆ 1 ನೇ ಪ್ರತಿವಾದಿಯು ಮೀನು ಸಾಕಾಣಿಗೆಯನ್ನು ಮಾಡುತ್ತಿದ್ದು ಅದರಿಂದ ನೀರಿನ ಕೊರತೆ ಆಗುತ್ತದೆ ಎಂದು ಈ ದಾವೆ ದಾಖಲಿಸಿದ್ದೇನೆ. ಉಳಿದ ರೈತರು ಪೈಪು ಲೈನ್ ಮೂಲಕ ತಮ್ಮ ಜಮೀನಿಗೆ ನೀರನ್ನು ತೆಗೆದುಕೊಂಡು ಹೋದರೆ ಕೊರತೆ ಆಗೋದಿಲ್ಲವಾ ಅಂದರೆ ಸಾಕ್ಷಿಯು ಅವರು ಬೆಳೆಯನ್ನು ಬೆಳೆಯುತ್ತಾರೆ. ಬೆಳೆಗಾಗಿ ರೈತರು ಕಾನೂನು ಬಾಹೀರವಾಗಿ ನೀರನ್ನು ತೆಗೆದುಕೊಂಡು ಹೋದರು ನಮಗೆ ಯಾವುದೇ ತೊಂದರೆ ಇಲ್ಲ. ಆಂದ್ರ ಮೂಲಕ ವ್ಯಕ್ತಿಯಾದಂತಹ 1 ನೇ ಪ್ರತಿವಾದ ತಮ್ಮ ಜಮೀನಿನ ಒಂದು ಭಾಗದಲ್ಲಿ ವ್ಯವಸಾಯದ ಉದ್ದೇಶದಿಂದ ಮೀನು ಸಾಕಾಣಿಕೆ ಮಾಡುತ್ತಿದ್ದು ಅದನ್ನು ಸಹಿಸಲಾರದೇ ನಾನು ಮತ್ತು ಉಳಿದ ವಾದಿಯರು ಸೇರಿ ಅವರ ವಿರುದ್ದ ಸುಳ್ಳು ದಾವೆ ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ.

4. ದಾವೆ ದಾಖಲಿಸುವ ಪೂರ್ವದಲ್ಲಿ ಸಂಬಂದಿಸಿದ ನೀರಾವರಿ ಇಲಾಖೆಯ ಅಧಿಕಾರಿ, ತಹಶಿಲ್ದಾರ ಮತ್ತು ಊರಿನ ಇತರೆ ಜನರು ಸ್ಥಳಕ್ಕೆ ಬಂದಿದ್ದರು ಅಂದರೆ ಸರಿ. ಆ ಸಮಯದಲ್ಲಿ ಊರಿನ ಸುಮಾರು 60 ಜನರು 1 ನೇ ಪ್ರತಿವಾದಿ ಮಾಡಿರುವಂತಹ ಮೀನು ಸಾಕಾಣಿಕೆ ಹೊಂಡದಿಂದ ಬೋರ್ ವೆಲ್ಲುಗಳ ಅಂತರ್ಜನ ಹೆಚ್ಚಿಗೆ ಆಗಿದೆ ವಾದಿಯರು ಹೇಳುವ ಹಾಗೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ ಎಂದು ಹೇಳಿಕೆ ಸಹ ಕೊಟ್ಟಿರುತ್ತಾರೆ ಅಂದರೆ ಸರಿ. 1 ನೇ ಪ್ರತಿವಾದಿಯು ಕಾನೂನು ಬದ್ದವಾಗಿ ಮೀನು ಸಾಕಾಣಿಕೆ

ಮಾಡುತ್ತಿದ್ದಾರೆ ಎಂದು ಕೇಂದ್ರ ಸರ್ಕಾರದವರು 1 ನೇ ಪ್ರತಿವಾದಿಗೆ ಸಹಾಯ ಧನ ಸಹ ನೀಡಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ 4 ಭಾವ ಚಿತ್ರಗಳನ್ನು ತೋರಿ ಬಾಸ್ಕರಾರಜು ಇವರು ಮಾಡಿರುವಂತಹ ನೀರಿನ ಹೊಂಡದ ಪಕ್ಕದಲ್ಲಿ ಅವರ ಜಮೀನಿನ ಅಕ್ಕಪಕ್ಕದಲ್ಲಿರುವ ಇತರೆ ರೈತರು ನೀರಿಗಾಗಿ ಮಾಡಿರುವಂತಹ ಪೈಪು ಲೈನಿನ ಪೊಟೋಗಳು ಇರುತ್ತವೆ ಎಂದು ಕೇಳಲಾಗಿ ಸಾಕ್ಷಿಯು ಭಾವಚಿತ್ರವನ್ನು ನೋಡಿ ಒಪ್ಪಿಕೊಂಡಿದ್ದು ಅವುಗಳನ್ನು ***ನಿಡಿ 1*** ಎಂದು ಗುರುತಿಸಲಾಯಿತು.

5. 1 ನೇ ಪ್ರತಿವಾದಿಯು 36 ಇಂಚಿನ ಪೈಪು ಲೈನನ್ನು ಹಾಕಿಕೊಂಡು ಹೋಗಿರುತ್ತಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ. 1 ನೇ ಪ್ರತಿವಾದಿಯು ಹಾಕಿರುವ ಪೈಪು ಲೈನು ಭೂಮಿಯ ಆಳದಲ್ಲಿ ಇದೆ ಅಂದರೆ ಸರಿ. ಸಾಕ್ಷಿಗೆ 2 ಭಾವಚಿತ್ರಗಳನ್ನು ತೋರಿಸಿ ಸದರಿ ಭಾವಚಿತ್ರದಲ್ಲಿ ಕಾಣುವ ಪೈಪು ಲೈನು 1 ನೇ ಪ್ರತಿವಾದಿಯು ತಮ್ಮ ಜಮಿನಿಗೆ ಮಾಡಿಕೊಂಡಿರುವಂತಹ ಪೈಪು ಲೈನು ಆಗಿರುತ್ತದೆ ಅಂತಾ ಕೇಳಲಾಗಿ ಸಾಕ್ಷಿಯು ಭಾವ ಚಿತ್ರಗಳನ್ನು ನೋಡಿ ಹೌದು ಎಂದು ಗುರುತಿಸಿದ್ದು ಸದರಿ ಭಾವ ಚಿತ್ರಗಳನ್ನು ***ನಿಡಿ 2 ಮತ್ತು 3*** ಎಂದು ಗುರುತಿಸಲಾಯಿತು.

6. 1 ನೇ ಪ್ರತಿವಾದಿಯು ಹಾಕಿರುವಂತಹ ಪೈಪು ಲೈನು ವಾದಿಯರಿಗೆ ಸೇರಿದ ಯಾವ ಯಾವ ಜಮೀನು ಸರ್ವೆ ನಂಬರು ಮೂಲಕ ಹಾದು ಹೋಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಆದರೆ ನನ್ನ ಜಮೀನು ಸರ್ವೆ ನಂ 114 ಇರುತ್ತದೆ. ಸದರಿ ಪೈಪು ಲೈನು ಬನ್ನಿಕಲ್ಲು ಗ್ರಾಮದ ಸೋಮೇಶ್ವರ ಕೆರೆಯಿಂದ ಹಂಪಸಾಗ ತುಂಗಾಭದ್ರ ನದಿಗೆ ಸೇರುವ ಹಳ್ಳದಲ್ಲಿ ಹಾದು ಹೋಗಿರುತ್ತದೆ ಅಂದರೆ ಸರಿ. ಸಾಕ್ಷಿಗೆ ಪ್ರತಿವಾದ ಪತ್ರದ ಜೊತೆ ಹಾಜರು ಪಡಿಸಿದ ಕಚ್ಚಾ ನಾಕಶೆಯನ್ನು ತೋರಿಸಿ ಸದರಿ ಕಚ್ಚಾ ನಕಾಶೆಯಲ್ಲಿ ಪಾಯಿಂಟ್ ಎ ದಿಂದ ಪಾಯಿಂಟ್ ಬಿ ವರೆಗೆ ತೋರಿಸಿದ ಜಾಗದಲ್ಲಿ ಪೈಪು ಲೈನು ಹೋಗಿದೆ ಅಂತಾ ಕೇಳಲಾಗಿ

ಸಾಕ್ಷಿಯು ಅದನ್ನು ನೋಡಿ ಹೌದು ಎಂದು ಉತ್ತರಿಸಿರುತ್ತಾರೆ. ಸದರಿ ಸ್ಕೆಚ್ಚನ್ನು ***ನಿಡಿ 4*** ಎಂದು ಗುರುತಿಸಲಾಯಿತು.

7. ಸದರಿ ಹಳ್ಳದ ಭಾಗದಲ್ಲಿ ವಾದಿಯರಿಗೆ ಸೇರಿದ ಯಾವುದೇ ಪಟ್ಟಾ ಜಮೀನು ಇಲ್ಲ ಅಂದರೆ ಸರಿಯಲ್ಲ. ಸದರಿ ಹಳ್ಳದ ಮೇಲ್ಭಾಗದಲ್ಲಿ ಇರುವ ವಾರದಿಯರ ಜಮೀನಿನಲ್ಲಿ ವಾದಿಯರು ಸದರಿ ಹಳ್ಳದ ಜಾಗವನ್ನು ಒತ್ತುವರಿ ಮಾಡಿಕೊಂಡು ಸಾಗು ಮಾಡುತ್ತಿದ್ದೇವೆ ಅಂದರೆ ಸರಿ. ಸದರಿ ಒತ್ತುವರಿ ಜಮೀನಿನಲ್ಲಿ ನಾವು ಕೃಷಿ ಹೊಂಡಗಳನ್ನು ಮಾಡಿಕೊಂಡಿರುತ್ತೇವೆ ಅಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಬೆಳೆ ಬೆಳೆದಿರುತ್ತೇವೆ ಎನ್ನುತ್ತಾರೆ. 1 ನೇ ಪ್ರತಿವಾದಿಯು ನಾವು ಒತ್ತುವರಿ ಮಾಡಿಕೊಂಡಿರುವ ಹಳ್ಳದ ಜಾಗದಲ್ಲಿ ಪ್ರತಿವಾದಿ ನಂ 2 ಮತ್ತು 3 ರವರಿಂದ ಪರವಾನಿಗೆ ಪಡೆದು ಪೈಪು ಲೈನನ್ನು ಹಾಕಿಕೊಂಡು ಹೋಗಿದ್ದು ಆ ಒಂದು ಸಿಟ್ಟಿನಿಂದ ನಾವು 1 ನೇ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನೀರಿನ ಕೊರತೆ ಆಗುತ್ತದೆ ಎನ್ನುತ್ತಾರೆ.

8. 1 ನೇ ಪ್ರತಿವಾದಿಯು ನಾವು ಒತ್ತುವರಿ ಮಾಡಿರುವಂತಹ ಜಾಗದಲ್ಲಿ ಜೆ ಸಿ ಬಿ ಮೂಲಕ ಪೈಪು ಲೈನು ಹಾಕಿಕೊಂಡು ಹೋಗುವಾಗ ನಾವು ಪ್ರತಿವಾದಿಗೆ 1 ಇವರಿಗೆ ತಕರಾರು ಮಾಡಿ ಅವರಿಂದ ಹಣವನ್ನು ಕೇಳಿರುತ್ತೇವೆ ಅಂದರೆ ಸರಿಯಲ್ಲ. ಸದರಿ ಪೈಪು ಲೈನ್ ವಿಚಾರಕ್ಕಾಗಿ ನಮ್ಮ ಮತ್ತು 1 ನೇ ಪ್ರತಿವಾದಿಯರ ನಡುವೆ ಗಲಾಟೆ ಆಗಿ ತಂಬ್ರಳ್ಳಿ ಪೊಲೀಸ್ ಠಾಣೆಗೆ ಹೋಗಿರುತ್ತೇವೆ ಅಂದರೆ ಸರಿ. ತಂಬ್ರಳ್ಳಿ ಪೊಲೀಸರು 1 ನೇ ಪ್ರತಿವಾದಿಯು ಕಾನೂನು ಬದ್ಧವಾಗಿ ಪರವಾನಿಗೆ ಪಡೆಯುವ ಮೂಲಕ ಪೈಪು ಲೈನನ್ನು ಮಾಡಿಕೊಳ್ಳುತ್ತಿದ್ದಾರ ಅದಕ್ಕೆ ನೀವು ತೊಂದರೆ ಮಾಡಬೇಡಿ ಎಂದು ನಮಗೆ ಬುದ್ದಿವಾದ ಹೇಳಿ ಕಳುಹಿಸಿದ್ದರು ಅಂದರೆ ಸರಿ. ಆ ಸಿಟ್ಟಿನಿಂದ ನಾವೆಲ್ಲರೂ ಸೇರಿ ಈ ದಾವೆಯನ್ನು ದಾಖಲಿಸಿರುತ್ತೇವೆ ಅಂದರೆ

ಸರಿ. ಸಿದ್ದಪ್ಪ ಇವರ ಮಾತನ್ನು ಕೇಳಿಕೊಂಡು ನಾವು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

9. 2 ನೇ ಮತ್ತು 3 ನೇ ವಾದಿಯರು ನನ್ನ ಸಂಬಂದಿಕರು. ವಾದಿ 5 ರಿಂದ 9 ಹಾಗೂ ನಾನು ಒಂದೇ ಊರಿನವರು ಮತ್ತು ಕುಲಸ್ಥರು ಅಂದರೆ ಸರಿ. 1 ನೇ ವಾದಿ ಮತ್ತು ನಾನು ಒಂದೇ ಊರಿನವರು. 1 ನೇ ವಾದಿ ಕಾಂಗ್ರೆಸ್ ಪಕ್ಷದ ಮುಖಂಡ ಅಂದರೆ ಸರಿ. ನಾನು ಮತ್ತು ಉಳಿದ ವಾದಿಯರೆಲ್ಲರೂ ಒಂದೇ ಪಕ್ಷಕ್ಕೆ ಸೇರಿದವರು ರಾಜಕೀಯವನ್ನು ಮಾಡಿಕೊಳ್ಳುತ್ತಾ ಹೋಗಿರುತ್ತೇವೆ ಅಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ನಾವು ಹೇಳುವ ಹಾಗ ಯಾವುದೇ ರೀತಿಯ ನೀರಿನ ತೊಂದರೆ ಆಗಿಲ್ಲ, ವಾದಿಯರಾದ ನಾವೆಲ್ಲರೂ 1 ನೇ ಪ್ರತಿವಾದಿಗೆ ಹಣವನ್ನು ಕೇಳಿದ್ದು ಅವನು ಯಾವುದೇ ಹಣವನ್ನು ನಮಗೆ ಕೊಡದೇ ಇದ್ದರಿಂದ ಅವನಿಗೆ ತೊಂದರೆ ಕೊಡಲು ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಹಾಕಿರುವ ಪೈಪು ಲೈನು 18 ಇಂಚಿನ ಪೈಪು ಲೈನು ಅದು 36 ಇಂಚಿನ ಪೈಪು ಲೇನ್ ಇರುವುದಿಲ್ಲ ಅಲ್ಲಿ ನಮ್ಮ ಯಾವುದೇ ಜಮೀನು ಇರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ. ಅದು 1 ನೇ ವಾದಿಗೆ ಗೊತ್ತು. ಸಾಕ್ಷಿಯು ಮುಂದುವರೆದು ಅಲ್ಲಿ ನಮ್ಮ ಪಟ್ಟಾ ಜಮೀನು ಇಲ್ಲ ಅನ್ನುತ್ತಾರೆ.

10. ಈ ದಾವೆಯಲ್ಲಿ ನಮಗೆ ಯಾವುದೇ ಸಾರ್ವಜನಿಕ ಹಿತಾಸಕ್ತಿ ಇಲ್ಲ ಉದ್ದೇಶಪೂರ್ವಕವಾಗಿ 1 ನೇ ಪ್ರತಿವಾದಿಗೆ ತೊಂದರೆ ಕೊಡಲು ಈ ದಾವೆ ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ.

<u>**ಮರು ವಿಚಾರಣೆ ಇಲ್ಲ**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ